ಶ್ರೀ ಬಿ. ಶಿವರಾಂ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸರ್ಕಾರದ ಗಮನಸೆಳೆದು ಸಾಕಷ್ಟು ಚರ್ಚೆಯಾಗಿದೆ. ಒಟ್ಟಾರೆ ಸಿಓಡಿ ತನಿಖೆ ಮಾಡಿಯೆಂದು ಕೇಳುತ್ತಿದ್ದೇನೆ. ಗೃಹಮಂತ್ರಿಗಳು ಏನು ಹೇಳುತ್ತಾರೆಂದರೆ ಅಲ್ಲಿರುವವರು ಪೋಲೀಸರೇ ಎಂದು, ಹಾಗಾದರೆ ಸಿಓಡಿ ಇಲಾಖೆ ಏಕೆ? ಆ ಕೆಲಸವನ್ನು ನಿರ್ವಹಿಸಲಿಕ್ಕೆ ವ್ಯವಸ್ಥೆಯಿಲ್ಲವೇ? ಸಿಓಡಿ ದಕ್ಷತೆ ಇಲ್ಲ ನಮ್ಮ ಪೋಲೀಸರಿಗೆ ನಾವು ಕೇಳುತ್ತೇವೆಂದರೆ, ಬೇರೆ ವಿಶೇಷವಾದ ಏನಾದರೂ ಇನ್ನೊಂದು ಇಲಾಖೆಯಿದ್ದರೆ ಆ ಮೂಲಕ ವಿಚಾರಣೆ ಮಾಡಿಸಿ, ಈಗಿರತಕ್ಕ ಪೋಲೀಸರ ಮೇಲೆ ನಂಬಿಕೆ ಇಲ್ಲ ಎನ್ನತಕ್ಕ ವಿಚಾರವನ್ನು ಸ್ಪಷ್ಟಪಡಿಸಿದ್ದಾರೆ. ಇಷ್ಟು ದಿವಸಗಳಾದರೂ ನಿಷ್ಪಕ್ಷಪಾತವಾದ ವಿಚಾರಣೆಯಾಗಿಲ್ಲ. ಸಿಓಡಿ ಮೂಲಕ ವಿಚಾರಣೆ ಮಾಡಿಸಬೇಕು. ಇಲ್ಲದಿದ್ದರೆ ಬೇರೆ ಮಾರ್ಗದ ಮೂಲಕ ವಿಚಾರಣೆ ಮಾಡಿಸಿ.

ಅಧ್ಯಕ್ಷರು : ಮಾನ್ಯ ಸದಸ್ಯರ ಮಾತಿನ ಅರ್ಥ ಇಷ್ಟೆ. ಯಾರಾದರೂ ಸಣ್ಣಪುಟ್ಟ ಕಳ್ಳಬಟ್ಟಿ ಮಾಡಿದರೆ ಬಹಳ ದುಭಾರಿ ಮಾಡುತ್ತೀರಿ, ಇಷ್ಟೆಲ್ಲ ವ್ಯವಸ್ಥಿತವಾಗಿ ಮಾಡಬೇಕಾದರೆ ಇದರ ಹಿಂದೆ ದೊಡ್ಡವರು ಪ್ರಭಾವಶಾಲಿಗಳು ಇರುತ್ತಾರೆ. ಮಾಮೂಲಿ ಎನ್‌ಕ್ವಾಯಿರಿ ಮಾಡಿದರೆ ಸರಿಯಾಗುವುದಿಲ್ಲ ಸಿಓಡಿ ಒಪ್ಪಿಸಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಇದನ್ನು ಸಿಓಡಿಗೆ ಕೊಡಲಿಕ್ಕೆ ನನ್ನದು ತಕರಾರು ಇಲ್ಲ. ರೆಗ್ಯುಲರ್ ಪೋಲೀಸರಿಗೆ ತನಿಖೆ ಮಾಡಿಸಿವುದಕ್ಕೆ ಸಹ ನನಗೆ ತಕರಾರು ಇಲ್ಲ.

ಮಾನ್ಯ ಸದಸ್ಯರು ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಲುಕ್ಸಾನು ಆಗತಕ್ಕದ್ದನ್ನು ಅಥವಾ ಕುಡಿಯತಕ್ಕ ಜನಗಳಿಗೆ ಒಳ್ಳೆಯ ಶರಾಬು ಕೊಡುವ ದೃಷ್ಟಿಯಿಂದ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದಿರುವುದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾವುದೇ ಇಲಾಖೆ ಇರಲಿ ಪೋಲೀಸರು ಹೋಗಿ ರೈಡ್ ಮಾಡಿದ್ದಾರೆ, ಲಕ್ಷಾಂತರ ರೂಪಾಯಿ ಮಾಲನ್ನು ಹಿಡಿದಿದ್ದಾರೆ ಇದರಲ್ಲಿ ಅವರುಗಳ ಇನ್‌ವಾಲ್ವ್‌ಮೆಂಟ್ ಇದೆಯೇ? ಅವರಿಗೆ ಇನ್‌ಫರಮೇಶನ್ ಬಂದ ತಕ್ಷಣ ರೈಡ್ ಮಾಡಲಿಲ್ಲವೆ? ಅಥವಾ ಮುಚ್ಚಿವುವುದರಲ್ಲಿ ಏನಾದರೂ ಶಾಮೀಲಾಗಿದ್ದಾರೆ ಎನ್ನತಕ್ಕಂಥ ಅಪಾದನೆಗಳು ಇದ್ದರೆ, ಬೇರೆ ಅಧಿಕಾರಿಗಳಿಗೆ ಹೇಳಬೇಕಾಗಿತ್ತು. ಈಗ ಹೇಳುತ್ತಿದ್ದಾರೆ ಆ ಅಧಿಕಾರಿಗಳ ಬಗ್ಗೆ ವಿಶ್ವಾಸ ಇಲ್ಲ ಆದ್ದರಿಂದ ನಾನು ಭರವಸೆ ಕೊಡುತ್ತೇನೆ. ಉನ್ನತ ಅಧಿಕಾರಿಗಳಿಂದ ಇದರ [illegible] ನಾನು ಪರಿಶೀಲನೆ ಮಾಡಿ ಇದರ ಹಿಂದೆ ಯಾರು ಇದ್ದಾರೆ, ಯಾವ ಶಕ್ತಿಗಳು ಇದ್ದಾರೆ, ಇದನ್ನೆಲ್ಲ ಕೂಲಂಕುಷವಾಗಿ ವಿಚಾರಣೆ ಮಾಡಿ ಈ ಸದನಕ್ಕೆ ತಿಳಿಸುತ್ತೇನೆ.

ಶ್ರೀ ಗಂಧದ ಬೆಲೆಯನ್ನು ಏರಿಸಿರುವುದರಿಂದ ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿಗೆ ತೀವ್ರ ಧಕ್ಕೆ.

ಶ್ರೀ ಎನ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಶ್ರೀಗಂಧದ ಬೆಲೆಯನ್ನು ಏರಿಸಿವುದರಿಂದ ಹಾಗೂ ಪೂರ್ಣಾವಧಿ ಅಧ್ಯಕ್ಷರನ್ನು ನೇಮಕ ಮಾಡದಿರುವುದರಿಂದ ಕರ್ನಾಟಕ ಸೋಪ್ಸ್‌ಅಂಡ್ ಡಿಟರ್ಜೆಂಟ್ ತಿಮಿಟೆಡ್ ಕಾರ್ಖಾನೆಗೆ ತೀವ್ರ ಧಕ್ಕೆಯಾಗಿರುವ ಬಗ್ಗೆ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಬಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ) ಮಾನ್ಯ ಅಧ್ಯಕ್ಷರೇ , ಸರ್ಕಾರದ ತನ್ನ ಆದೇಶ ಸಂಖ್ಯೆ ಎಣಇ 40 ಎಫ್‌ಎಸ್‌ಡಬ್ಲ್ಯು 94 ದಿನಾಂಕ 13-3-95ರಲ್ಲಿ ಕ.ಎಸ್.ಡಿ.ಎಲ್ ಹಾಗೂ ಎಂ.ಎಸ್.ಐಯ.ಎಲ್. ಈ ಸಂಸ್ಥೆಗಳಿಗೆ ಸರಬರಾಜು ಮಾಡುವ ಹಾರ್ಟವುಡ್ ಮತ್ತು ಮಿಕ್ಸರ್‌ವುಡ್ ದರ್ಜೆಯ

ಗಂಧದ ಮರದ ಬೆಲೆಯನ್ನು ತೆರಿಗೆ ಮತ್ತು ಸುಂಕ ಇತ್ಯಾದಿಗಳನ್ನು ಹೊರತುಪಡಿಸಿ ಪ್ರತಿ ಟನ್ನಿಗೆ 2,75,000-00 ಹಾಗೂ 1,60,000-00 ರೂಗಳೆಂದು ನಿಗದಿ ಮಾಡಿದೆ. ಈ ರೀತಿಯ ಬೆಲೆಯ ಪರಿಷ್ಕರಣದಿಂದ ಕಂಪನಿಯ ಮೇಲೆ ವರ್ಷಕ್ಕೆ ರೂ.6.5 ಕೋಟಿಗಳಷ್ಟು ಹೆಚ್ಚು ಆರ್ಥಿಕ ಹೊರೆಯು ಬೀಳಲಿದೆ. ಈ ರೀತಿ ಗಂಧದ ಬೆಲೆ ಹೆಚ್ಚಳದಿಂದ ಕಂಪನಿಯ ಪ್ರಸಕ್ತ ಪುನರ್ ಸಜ್ಜೀಕರಣ ಕಾರ್ಯ ಕ್ರಮದ ಮೇಲೆ ಯಾವ ರೀತಿಯ ಪರಿಣಾಮವಾಗುವುದೆಂಬುದರ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ. ಈ ಅಂಶದ ಬಗ್ಗೆ ಎಲ್ಲಾ ಆಯಾಮಗಳಿಂದ ಪರಿಶೀಲಿಸಿದ ನಂತರ ಸಧ್ಯದಲ್ಲೇ ಸೂಕ್ತ ತೀರ್ಮಾನವನ್ನು ಕೈಗೊಳ್ಳಲಾಗುವುದು. ಹಾಲೀ ಸರ್ಕಾರದ ಪ್ರಧಾನ ಕಾರ್ಯದರ್ಶಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ಕಂಪನಿಯ ಅಧ್ಯಕ್ಷರಾಗಿದ್ದಾರೆ. ಸರ್ಕಾರವು ಇಷ್ಟರಲ್ಲೇ ಕಂಪನಿಗೆ ಪೂರ್ಣಾವಧಿ ಅಧ್ಯಕ್ಷರನ್ನು ನೇಮಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಿದೆ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಲ್ಲಿಗೆ ಮ್ಯಾನೇಜಿಂಗ್ ಡೈರೆಕ್ಟರ್‌ನ್ನು ಚೇರ್ಮನ್‌ರನ್ನಾಗಿ ಮಾಡಬೇಕೆಂದು ಆದೇಶವನ್ನು ಹೊರಡಿಸಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್ : ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಅವರನ್ನೇ ಚೇರ್ಮನ್ನರನ್ನಾಗಿ ಮಾಡಿರುವುದಕ್ಕೆ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಸನ್ಮಾನ್ಯ ಮಂತ್ರಿಗಳು 22.2.95 ರಂದು ಆ ಕಾರ್ಖಾನೆಗೆ ಭೇಟಿ ಕೊಟ್ಟಾಗ ಕಾರ್ಖಾನೆಯ ನೌಕರರು ತಮ್ಮ ಕಾರ್ಖಾನೆಯ ಪರಿಸ್ಥಿತಿ ಬಗ್ಗೆ ಅದನ್ನು ಯಾವರೀತಿ ಉತ್ತಮಗೊಳಿಸಬಹುದು ಎಂದು ಉತ್ಸಾಹದಿಂದ ತಮಗೆ ಒಂದು ವರದಿಯನ್ನು ಕೊಟ್ಟರು. ತಾವು ಕೂಡ ಈ ವರದಿಯನ್ನು ಕೇಳಿದಮೇಲೆ ಈ ಕಾರ್ಖಾನೆಯನ್ನು ಯಾವುದೇ ರೀತಿಯಲ್ಲಿ ಖಾಸಗಿಕರಣ ಮಾಡುವುದು ಬೇಡ. ನೀವು ಚೆನ್ನಾಗಿ ಕೆಲಸಮಾಡಿ ಇದನ್ನು ಉತ್ತಮಪಡಿಸಿದರೆ ನಾವು ಕೂಡ ಸರ್ಕಾರದಿಂದ ಎಲ್ಲ ರೀತಿಯ ಪ್ರೋತ್ಸಾಹ ಕೊಡುತ್ತೇವೆ ಎಂದು ತಾವು ಭರವಸೆಯನ್ನು ಕೊಟ್ಟಿರಿ. ತಾವು 22.2.95ರಂದು ಭೇಟಿ ಕೊಟ್ಟ ಕೆಲವೇ ದಿವಸಗಳಲ್ಲಿ ಗಂಧದ ಬೆಲೆ ಒಂದು ಟನ್ನಿಗೆ 1.44 ಲಕ್ಷ ರೂಪಾಯಿ ಇದ್ದದ್ದು 2.75 ಲಕ್ಷಕ್ಕೆ ಹೆಚ್ಚಿಸಲಾಗಿದೆ. ತಾವೇ ಹೇಳಿದಹಾಗೆ ಇದರಿಂದ ವರ್ಷಕ್ಕೆ ಆರೂವರೆ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಹೊರೆ ಈ ಕಾರ್ಖಾನೆಯ ಮೇಲೆ ಬೀಳುತ್ತದೆ. ಮಾನ್ಯ ಅಧ್ಯಕ್ಷರೆ, ಈ ಸೋಪು ಕಾರ್ಖಾನೆ ಮಾನ್ಯ ವಿಶ್ವೇಶ್ವರಯ್ಯನವರ ಕನಸಿನ ಕೂಸು. ಕರ್ನಾಟಕ ಸರ್ಕಾರಕ್ಕೆ ನಿಜವಾಗಿಯೂ ಹೆಮ್ಮೆ ತರುವ ಸುಗಂಧಭರಿತ ಕಾರ್ಖಾನೆಯಾಗಿದೆ. ಕಳೆದ ವರ್ಷ ಪ್ರೊಕ್ಟರ್ ಅಂಡ್ ಗ್ಯಾಂಬಲ್ ಎನ್ನುವ ಸೋಪ್ ಮ್ಯಾನುಫ್ಯಾಕ್ಚರಿಂಗ್ ಮಾಡುವ ದೊಡ್ಡ ಕಂಪನಿ, ಅದು ಒಂದೇ ವರ್ಷದಲ್ಲಿ 40 ಕೋಟಿ ರೂಪಾಯಿಗಳನ್ನು ಜಾಹೀರಾತುಗಳಿಗೋಸ್ಕರ ಖರ್ಚು ಮಾಡಿದರು.

ಇನ್ನೊಂದು ಪ್ರಮುಖ ಕಾರ್ಖಾನೆಯವರು 75 ಕೋಟಿ ರೂಪಾಯಿಗಳನ್ನು ಜಾಹೀರಾತಿಗಾಗಿ ಖರ್ಚು ಮಾಡಿದರು. ಇಷ್ಟಾದರೂ ಯಾವುದೇ ಜಾಹೀರಾತು ಇಲ್ಲದೆ, ಯಾವುದೇ ಬೆಂಬಲ ಇಲ್ಲದೆ ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್‌ನವರು 80 ಕೋಟಿ ರೂಪಾಯಿ ಬೆಲೆಬಾಳುವ ಸೋಪನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆಯೆಂದರೆ ಇದು ನಮಗೆ ಹೆಮ್ಮೆ ಬರುತ್ತದೆ. ಈ ಒಂದು ವಿಶ್ವೇಶ್ವರಯ್ಯನವರ ಕನಸಿನ ಕೂಸನ್ನು ದಯವಿಟ್ಟು ಅದರ ಕುತ್ತಿಗೆ ಹಿಚುಕುವುದಕ್ಕೆ ಹೋಗಬೇಡಿ, ಅದರ ಪ್ರಾಣವನ್ನು ತೆಗೆಯಲೇಬೇಡಿ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಹಿಂದಿನ ಸರ್ಕಾರ ಇದ್ದಾಗ ಈ ಕಂಪನಿಯನ್ನು ಪುನರುಜ್ಜೀವನ ಗೊಳಿಸುವುದರ ಬಗ್ಗೆ ಯಾವುದೇ ವಿಚಾರವನ್ನು ಬಿ.ಐ.ಎಫ್.ಆರ್. ಮುಂದೆ ಇರಲಿಲ್ಲ. ಅದಕ್ಕೆ ಬಿ.ಐಎಫ್.ಆರ್.ನವರು ಕೆ.ಎಸ್.ಡಿ.ಎಲ್,ನ ಬಾಕಿಯ ಸಲುವಾಗಿ ಹರಾಜು ಹಾಕುವುದಕ್ಕೆ ತೀರ್ಮಾನಿಸಿದರು. ಆ ಸಮಯದಲ್ಲಿ ಅಲ್ಲಿಯವರು ಈಗ ಹೊಸ ಸರ್ಕಾರ ಬರುತ್ತದೆ ಅವರ ಜೊತೆ

ವಿಚಾರವನ್ನು ಅಧಿಕಾರಿಗಳಿಗೆ ತಿಳಿಸಿಬಿಟ್ಟು ನಂತರ ನೀವು ಮುಂದಿನ ಹೆಜ್ಜೆ ಇಡಿ ಎಂದು ಬಿ.ಐ.ಎಫ್.ಆರ್.ಗೆ ಹೇಳಿದರು, ಅದ್ದರಿಂದ ಈಗ ನಾವು ಸಮರೋಪಾದಿಯಲ್ಲಿ ಸರ್ಕಾರ ತನ್ನ ನಿಶ್ಚಿತ ಒಪ್ಪಿಗೆಯನ್ನು ಈ ಕಾರ್ಖಾನೆಯನ್ನು ಪುನರುಜ್ಜೀವನ ಗೊಳಿಸುವ್ದುದರ ಬಗ್ಗೆ ಬಿ.ಐ.ಎಫ್.ಆರ್.ನವರಿಗೆ ದಯವಿಟ್ಟು ತಿಳಿಸಬೇಕು. ಇಲ್ಲದಿದ್ದರೆ ಅವರು ಹರಾಜು ಹಾಕಿಬಿಡುತ್ತಾರೆ. ಒಂದು ಹರಾಜು ಹಾಕಿದಮೇಲೆ ಮುಂದೆ ನಮಗೆ ಸ್ಯಾಂಡಲ್ ಸೋಪ್ ಸಿಗಿವುದಿಲ್ಲ. ಅದರ ಬದಲು ಸ್ಯಾಂಡಲ್ ಸೋಪು ಸಿಗುತ್ತದೆ, ಇದರ ಜೊತೆಗೆ ಇವತ್ತು ವಿದೇಶಿ ಸೋಪುಗಳು ಆಕ್ರಮಣ ಮಾಡುತ್ತಿವೆ. ನಮ್ಮ ಸ್ವದೇಶಿ ತಯಾರಿಕೆಯ ಉತ್ತಮ ದರ್ಜೆಯ ಸ್ಯಾಂಡಲ್ ಸೋಪು ಕಾರ್ಖಾನೆಯನ್ನು ಉಳಿಸುವುದರ ಜವಾಬ್ದಾರಿ ನಮ್ಮ ಮುಂದೆ ಇದೆ. ನಾವು ತಿಳಿದಿರುವಂತೆ ಈ ಕಾರ್ಖಾನೆ 1987ನೇ ಇಸವಿಯಿಂದ 1993ರವರೆಗೆ ಸತತವಾಗಿ ನಷ್ಟವನ್ನು ಅನುಭವಿಸುತ್ತ ಬಂತು. ಈಗ 1994-95 ರಲ್ಲಿ ಲಾಭ ನಷ್ಟ ಇಲ್ಲದೇನೆ ಒಂದು ಸ್ಟೇಜ್‌ಗೆ ಈ ಕಾರ್ಖಾನೆ 1987ನೇ ಇಸವಿಯಿಂದ 1993ರವರೆಗೆ ಸರರವಾಗಿ ನಕ್ಷವನ್ನು ಅನುಭವಿಸುತ್ತ ಬಂತು.ಈಗ 1994-95ರಲ್ಲಿ ಲಾಭನಷ್ಟ ಇಲ್ಲದೇನೆ ಒಂದು ಸ್ಟೇಜ್‌ಗೆ ಈ ಕಾರ್ಖಾನೆ ಬಂದಿದೆ. ಇಲ್ಲಿಯ ಕಾರ್ಮಿಕರು ಮತ್ತು ವ್ಯವಸ್ಥಾಪಕರು ಬಹಳ ಉತ್ಸುಕರಾಗಿದ್ದಾರೆ, ಈ ಕಾರ್ಖಾನೆಯನ್ನು ಲಾಭಗಳಿಸುವ ಮಟ್ಟಕ್ಕೆ ತರಬೇಕು ಎಂದು. ನಾನು ನೋಡಿದ ಹಾಗೆ ಇಲ್ಲಿರುವಷ್ಟು ಇನ್ನಿಟ್ಯೂಶನಲ್ ಪೆಟ್ರಿಯಾಟಿಸಂ ಬೇರೆ ಕಾರ್ಖಾನೆಗಳಿಲ್ಲ. ಇಷ್ಟೊಂದು ಉತ್ಸಾಹದಿಂದ ತಮ್ಮ ಬೋನಸ್‌ಸ ಬಗ್ಗೆ, ಬಡ್ತಿ ಬಗ್ಗೆ ಕೇಳದೆ, ಈ ಕಾರ್ಖಾನೆಯನ್ನು ಉಳಿಸಬೇಕು ಎನ್ನುವ ಕಳಕಳಿಯಿಂದ ಅಲ್ಲಿಯ ಕಾರ್ಮಿಕರು ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ದಯವಿಟ್ಟು ಈ ಕಾರ್ಖಾನೆಯನ್ನು ಹಿಸುಕಬೇಡಿ. ತಾವು ಈಗ ವ್ಯವಸ್ಥಾಪಕ ನಿರ್ದೇಶಕರ ವ್ಯವಸ್ಥೆಯನ್ನು ಏನು ಮಾಡಿದ್ದೀರಿ, ಅದೇ ರೀತಿ ಸ್ಯಾಂಡಲ್ ಉಡ್‌ನ ಬೆಲೆಯನ್ನು ಇಳಿಸಬೇಕು. ಇದರಂದ ವರ್ಷಕ್ಕೆ ಆರೂವರೆ ಕೋಟಿ ರೂಪಾಯಿಗಳ ಬರ್ಡನ್ ಏನು ಈ ಕಾರ್ಖಾನೆಯ ಮೇಲೆ ಬೀಳುತ್ತದೆ ಅದನ್ನು ತಪ್ಪಿಸುವುದರ ಜೊತೆಗೆ ಬಿ.ಐ.ಎಫ್.ಆರ್.ಗೆ ಇದನ್ನು ಪುನರುಜ್ಜೀವನಗೊಳಿಸುವುದರ ಬಗ್ಗೆ ತಮ್ಮ ಪ್ರಪೋಸಲ್‌ನ್ನ ಕೊಡಬೇಕೆಂಬ ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರಿಗೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ ಬಗ್ಗೆ ಇದ್ದ ಕಳಕಳಿ ಮತ್ತು ಆತಂಕದ ಬಗ್ಗೆ ನಾನೂ ಕೂಡ ಅವರ ಜೊತೆ ಶೇರ್ ಮಾಡುತ್ತೇನೆ. ಈ ಕಾರ್ಖಾನೆಯನ್ನು ನಾನು ಹೇಳಿದಹಾಗೆ ರಿವ್ಯೂ ಮಾಡಿದಾಗ ಈ ಕೈಗಾರಿಕೆಯನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಲ್ಲಿ ಬೇರೆ ಎಂ.ಡಿ.ಯನ್ನು ಪೋಸ್ಟ್ ಮಾಡಿದ ನಂತರ ಸೈಸ್ಸ್ ಆಫ್ ರಿಕವರಿ ಏನು ತೋರಿಸುತ್ತಿದೆ ಎಂದರೆ ಈ ವರ್ಷ ಫೆಬ್ರವರಿ ಲಾಭ 85 ಲಕ್ಷ ರೂಪಾಯಿ ಇದೆ. ನನಗೆ ನಿಶ್ಚಿಂತವಾದ ಮಾಹಿತಿ ಗೊತ್ತಿಲ್ಲ. ಅದು ಒಂದು ಕೋಟಿಯಾಗಬಹುದು. ಅದರೆ ಡಿಪ್ರಿಸಿಯೇಷನ್ ಅನ್ನು ಗಮನಕ್ಕೆ ತಗೆದುಕೊಂಡಾಗ ಈ ಕಾರ್ಖಾನೆ ಹಾನಿಯಲ್ಲಿದೆ. ಅಕ್ಯುಮಲೇಟಿಡ್ ಲಾಸ್ 31-3-94ಕ್ಕೆ ಸಾಧಾರಣ 99 ಕೋಟಿ 49 ಲಕ್ಷ ರೂಪಾಯಿಗಳು. ಇಂತಹ ಪರಿಸ್ಥಿತಿಯಲ್ಲಿ ಈ ಕಾರ್ಖಾನೆ ಈಗಾಗಲೇ ಹಾನಿಯನ್ನು ಅನುಭವಿಸುತ್ತಿದೆ. ಬಿ.ಐ.ಎಫ್,ಆರ್. ಮುಂದೆ ಇದು ರಿಜಿಸ್ಟರ್ ಕೂಡ ಆಗಿದೆ. ಐ.ಡಿ.ಬಿ.ಐ.ಗೆ operative Agency ಎಂದು ಈಗಾಗಲೇ ಅಪಾಯಿಂಟ್ ಮಾಡಿದ್ದಾರೆ. Rehabilitataion package ಎಂದು ಬಿ,ಐ.ಎಫ್.ಆರ್. ಮುಂದೆ ಇದೆ. ಈಗ ಸ್ಯಾಂಡಲ್‌ವುಡ್ ರೇಟ್ ಏನು ಹೆಚ್ಚಾಗಿದೆ ಇದು ಯಾವುದೇ ರೀತಿಯಲ್ಲಿ ಕುತ್ತಿಗೆ ಹಿಚುಕುವ ಕಾರ್ಯಕ್ರಮ ಅಲ್ಲ. ಈಗ ಏನಾಗಿದೆ ಎಂದರೆ ಇದು ಅರಣ್ಯ ಇಲಾಖೆಯ ಕಾರ್ಯಕ್ರಮ ಅಲ್ಲ. ಈಗ ಏನಾಗಿದೆ ಎಂದರೆ ಇದು ಅರಣ್ಯ ಇಲಾಖೆಯ ಕಾರ್ಯಕ್ರಮ. ಸರ್ಕಾರ ಒಂದು ಕಮಿಟಿಯನ್ನು

ಮಾಡಿದೆ. ಅದರ ಪ್ರಕಾರ ಮೂರು ವರ್ಷಗಳ ಅವಧಿಯಲ್ಲಿ ರೇಟನಾನು ಹೆಚ್ಚು ಮಾಡುವಹಾಗಿಲ್ಲ, ಈಗ ಅದನ್ನು ಮಾಡಿದ್ದಾರೆ. ಇದಾದನಂತರ ನಾವು ಮುಖ್ಯ ಕಾರ್ಯದರ್ಶಿ ಮತ್ತು ಅಧಿಕಾರಿಗಳ ಮತ್ತು ಅಧಿಕಾರಿಗಳ ಸಭೆಯನ್ನು ಮಾಡಿ ಪುನ: ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಆದಷ್ಟು ಬೇಗ ಕ್ರಮ ತೆಗೆದುಕೊಂಡು ಈ ಕಾರ್ಖಾನೆಗೆ ಯಾವುದೇ ತೊಂದರೆ ಆಗದ ಹಾಗೆ ಯಾವ ರೀತಿಯಲ್ಲಿ ಅದರ ರಿಹ್ಯಾಬಿಟೇಶನ್ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ನೋಡಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಸುರೇಶ್ ಕುಮಾರ್ : ಅಧ್ಯಕ್ಷರೆ, ಇವತ್ತಿನ ದಿವಸ 99 ಕೋಟಿ ರೂಪಾಯಿಗಳ ಲಾಸ್ ಇದೆಯೆಂಬುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಅದು ಅಲ್ಲಿಗೆ corrupt and inefficient officers nexus ಏನು ಇದೆ, ಅದು ಕೂಡ ಒಂದು ಕಿರಣ. ಈಗ ಅದು ಲಾಭ ಮಾಡುವುದಕ್ಕೆ ಅನುಕೂಲವಾಗುವ ಪರಿಸ್ಥಿತಿಗೆ ಬಂದಿದೆ. ಇದಕ್ಕೆ ದಯವಿಟ್ಟು ಪ್ರೋತ್ಸಾಹ ಕೊಡಿ. ಈಗಾಗಲೇ ಇದರ ವಿಚಾರ ಬಿ.ಐ.ಎಫ್.ಆರ್.ಗೆ ಹೋಗಿರುವಾಗ, ಅದನ್ನು ಹರಾಜು ಹಾಕುವುದಕ್ಕೆ ಸಜೆಸ್ಟ್ ಮಾಡುವುದು ಬೇಡ. ಕರ್ನಾಟಕದ ಸಂಸ್ಕೃತಿಯ ನೆನಪಿಗೆ ಉದಾಹರಣೆಗೋಸ್ಕರವಾಗಿಯಾದರೂ ಇದನ್ನು ಉಳಿಸಿ. ಈ ಕಾರ್ಖಾನೆಯನ್ನು ಮುಂದುವರೆಸುವುದರ ಬಗ್ಗೆ ದಯವಿಟ್ಟು ಸ್ವಲ್ಪ ಯೋಚನೆ ಮಾಡಿ. ಇದನ್ನು ಖಾಸಗೀಕರಣ ಮಾಡುವುದು ಬೇಡ.

ಶ್ರೀ ಆರ್.ವಿ. ದೇಶಪಾಂಡೆ : ಖಾಸಗೀಕರಣ ಮಾಡುತ್ತೇವೆ ಎಂದು ನಾನು ಹೇಳಿಲ್ಲ. ಈಗ ಈ ಕೆ.ಎಸ್,ಡಿ,ಎಲ್ ಕಾರ್ಖಾನೆಗೆ ಹಾನಿಯಾಗುತ್ತಿದೆ. ತಾವು ಹೇಳಿದ ಹಾಗೆ ಕೆಲವು ಅಧಿಕಾರಿಗಳು ಇರಬಹುದು. ಅದರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಅದರೆ ಮುಖ್ಯವಾಗಿ under utilisation of the capacity ಎರಡನೇಯದು ಈ ಸೋಪು ಎನ್ನುವುದು ಬಹಳ ಕಾಂಪಿಟೇಶನ್ ಬಿಸಿನೆಸ್. ಕಾಸ್ಟ್ ಆಫ್ ಪ್ರೊಡಕ್ಷನ್ ಬಹಳ ಇದೆ. ಮೂರನೇಯದು, ಏನು ಸಾಲ ಪಡೆದುಕೊಂಡಿದ್ದಾರೆ, ಫೈನಾನ್ಷಿಯಲ್ ಇನ್ಸ್ಟಿಟ್ಯೂಶನ್‌ಗಳಿಂದ, ಅದರ ಬಡ್ಡಿ ಏನು ಕೊಡುತ್ತಿದ್ದಾರೆ servicing of debt ಅದು ಹೆಚ್ಚಾಗಿದೆ. ಹೀಗಾಗಿ ಈ ಕೈಗಾರಿಕೆಗೆ ಹಾನಿಯಾಗುತ್ತಿದೆ. ಅದ್ದರಿಂದ ಈ ಕಾರ್ಖಾನೆಯ ರಿಹೆಬಿಟಿಲೇಶನ್ ಬಗ್ಗೆ ಯಾವ ರೀತಿಯಲ್ಲಿ ಮಾಡುವುದಕ್ಕೆ ಸಾದ್ಯವೆಂದು ಆಲೋಚನೆ ಮಾಡಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ತಮಗೆ ನಾನು ಭರವಸೆಯನ್ನು ಕೊಡುತ್ತೇನೆ,

(ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ವಿಚಾರದಲ್ಲಿ ಮಾನ್ಯ ಕೈಗಾರಿಕಾ ಸಚಿವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಟೋಟಲ್ ಲಾಸ್ ಎನ್ನತಕ್ಕಂಥದ್ದು ಒಂದು ವಿಚಾರ, ಕೆಪಾಸಿಟಿಯನ್ನು ಪೂರ್ತಿಯಾಗಿ ಉಪಯೋಗ ಮಾಡಿಕೊಳ್ಳುತ್ತಾ ಇಲ್ಲ ಎನ್ನತಕ್ಕಂಥದ್ದು ಎರಡನೇ ವಿಚಾರ, ಮೂರನೆಯದು ಪುನರ್ ವಸತಿ ಪ್ಯಾಕೇಟಿಗೆ ಎನ್‌ಕರೇಜ್ ಮಾಡುತ್ತೇವೆ ಎನ್ನತಕ್ಕಂಥದ್ದು, ಈ ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ತಮಗೆ ಕೇಳುತ್ತಿದ್ದೇನೆ, ಟ್ರೇಡ್ ಅಥಾರಿಟೀಸನವರು ಸೋಪ್ ಮ್ಯಾನುಫ್ಯಾಕ್ಚರ್ ಮಾಡುವುದಕ್ಕೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್‌ಗೆ ಅವಕಾಶ ಕೊಟ್ಟಿದ್ದರು. ಅದನ್ನು ಉಪಯೋಗಿಸಿಕೊಂಡಿದ್ದಾರೆಯೇ? ಮಾರ್ಕೆಟಿಂಗ್ ಸಿಸ್ಟಂ, ಮೈಸೂರು ಸೇಲ್ಸ್ ಇಂಟರ್‌ನ್ಯಾಶನಲ್ ಲಿಮಿಟೆಡ್‌ಗೆ ಇದೆಯೇ? ಇಲ್ಲವೇ ಸಂಪೂರ್ಣವಾಗಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್‌ಗೆ ಇದೆಯೇ? ಪುನರ್ ವಸತಿಗೆ ಹಣ

ಕೊಡುವುದಕ್ಕೆ ಸರ್ಕಾರ ಒಪ್ಪಿಕೊಂಡಿದೆಯೇ? ಈ ಮೂರು ವಿಷಯಗಳನ್ನು ಸ್ಪಷ್ಟ ಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮೊದಲನೇ ವಿಷಯ ಟ್ರೇಡ್ ಅಥಾರಿಟೀಸ್ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆದರೆ, ಎಂಟೈರ್ ಮಾರ್ಕೆಟಿಂಗ್ ಕೆ.ಎಸ್.ಡಿ.ಎಲ್.ನವರೇ ಮಾಡುತ್ತಿದ್ದಾರೆ. ಪುನರ್ ವಸತಿ ಪ್ಯಾಕೇಜ್‌ನಲ್ಲಿ ಹೋದ ವರ್ಷ ನಾವು ಸ್ವಲ್ಪ ಹಣವನ್ನು ಕೊಟ್ಟಿದ್ದೇವೆ. ಮುಖ್ಯವಾಗಿ ಪುನರ್ ವಸತಿ ಪ್ಯಾಕೇಜ್‌ನಲ್ಲಿ ಗಂಧದ ಮರವನ್ನು ಏನು ಸಪ್ಲೈ ಮಾಡುತ್ತಿದ್ದೇವೆ, ಅದನ್ನು ರಿಯಾಯಿತಿ ದರಕ್ಕೆ ಸಪ್ಲೈ ಮಾಡಬೇಕು, ಆ ಕೆಲಸವನ್ನು ಮಾಡುತ್ತೇವೆಂದು ಬಿ.ಐ.ಎಫ್.ಆರ್.ಗೆ. ಕಮಿಟ್‌ಮೆಂಟ್ ಕೊಟ್ಟಿದ್ದೇವೆ. ಇದು ಮುಖ್ಯವಾದ ಕಮಿಟ್‌ಮೆಂಟ್. ಅದೇ ಪ್ರಕಾರ, ನಮ್ಮ ಮೈಸೂರು ಮತ್ತು ಶಿವಮೊಗ್ಗದಲ್ಲಿ ಏನು ಸ್ಯಾಂಡಲ್ ಆಯಿಲ್‌ಗಳು ಇವೆ, ಈ ಕಾರ್ಖಾನೆಗಳನ್ನು ಪುನ: ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ವರ್ಗಾವಣೆ ಮಾಡುತ್ತೇವೆಂದು ಬಿ.ಐ.ಎಫ್.ಆರ್.ಗೆ ತಿಳಿಸಿದ್ದೇನೆ.

ಶ್ರೀ ಕೆ.ಎನ್ ನಾಗೇಗೌಡ : ಪುನರ್ ವಸತಿ ಯೋಜನೆಯಲ್ಲಿ ಟೋಟಲ್ ಕಾಸ್ಟ್ ಎಷ್ಟು? ಇದನ್ನು ಮೇಂಟೇನ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಆರ್.ವಿ. ದೇಶಪಾಂಡೆ : ಇದರಲ್ಲಿ ಕಾಸ್ಟ್ ಪ್ರಶ್ನೆ ಬರುವುದಿಲ್ಲ. ಪುನರ್ ವಸತಿ ವಿಚಾರದಲ್ಲಿ ನಿಜವಾಗಿಯೂ, ಹಣಕಾಸಿನ ಸಂಸ್ಥೆಗಳು ಯಾವ ಪ್ರಕಾರ ಸಹಾಯ ಮಾಡುತ್ತೇವೆಂದು ಹೇಳುತ್ತಾರೋ, ಅದಕ್ಕೆ ಸರ್ಕಾರ ಕೆಲವು ಸಾರಿ ರಿಯಾಯಿತಿ ಕೊಡಬೇಕಾಗುತ್ತದೆ. ಸೇಲ್ಸ್ ಟ್ಯಾಕ್ಸ್ ವಸೂಲಿಯಲ್ಲಿ ಎಂಟ್ರಿ ಟ್ಯಾಕ್ಸ್ ವಸೂಲಿಯಲ್ಲಿ, ಪವರ್‌ಸಪ್ಲೈನಲ್ಲಿ ಕೆಲವು ರಿಯಾಯಿತಿ ಕೊಡಬೇಕಾಗುತ್ತದೆ. ಒಂದು ಮಾತು ನಿಜ. ನಾನು ಈ ಇಲಾಖೆ ಮಂತ್ರಿಯಾಗಿ, ಏನು ರಿಯಾಯಿತಿ ಮಾಡುವುದಕ್ಕೆ ಸಾಧ್ಯ, ಏನು ಸಹಾಯ ಮಾಡುವುದಕ್ಕೆ ಸಾಧ್ಯ, ಅದನ್ನು ಮಾಡಬೇಕಾಗುತ್ತದೆ. ಅಕಾಡೆಮಿಕ್ ಇಂಟರೆಸ್ಟ್‌ನಿಂದ ಕೇಳಿದಾಗ ಒಂದು ಪ್ರಶ್ನೆ ಬರುತ್ತದೆ. ಗಂಧದ ಮರದ ದರವನ್ನು ಹೆಚ್ಚು ಮಾಡಿದ್ದೇವೆ. ಇದರಿಂದ, ಸುಮಾರು ಆರೂವರೆ ಕೋಟಿ ರೂಪಾಯಿಗಳನ್ನು, ಕೈಗಾರಿಕೆಗೆ ಹೆಚ್ಚಿಗೆ ಕೊಡಬೇಕು. ನೀವು ಇದರ ಬಗ್ಗೆ ಒಂದು ಕ್ಷಣ ಯೋಚನೆ ಮಾಡಿ. ಇದು ಸರ್ಕಾರಿ ಕೈಗಾರಿಕೆ ಅಲ್ಲವೆಂದು ತಿಳಿದುಕೊಳ್ಳಿ, indirectly we are making loss to the Government. ಇದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಕೈಗಾರಿಕೆ ಪುನರ್ ವಸತಿ ಆಗಬೇಕಾಗುತ್ತದೆ. ಆ ಕೈಗಾರಿಕೆಯಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಹಿತವನ್ನೂ ನೋಡಿಕೊಳ್ಳಬೇಕಾಗುತ್ತದೆ. ಆದರೆ, ನಾವು ರಿಯಾಯಿತಿ ಮಾಡುವಾಗ, ಒಂದು ವಿಷಯವನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಯಾವ ಗಂಧದ ಮರವನ್ನು 2 ಲಕ್ಷ 75 ಸಾವಿರ ರೂಪಾಯಿಗಳಿಗೆ ಮಾರ್ಕೆಟಿನಲ್ಲಿ ಮಾರಾಟ ಮಾಡಬಹುದು. ಅದನ್ನು ಕಡಿಮೆದರದಲ್ಲಿ ನಾವು ಈ ಕೈಗಾರಿಕೆಯನ್ನು ಪುನರ್ ವಸತಿ ಮಾಡುವುದಕ್ಕೋಸ್ಕರ ಕೊಡಬೇಕಾಗಿದೆ. ನಮ್ಮದು ಹೆಮ್ಮೆಯ ಕೈಗಾರಿಕೆ, ಅಭಿಮಾನದ ಕೈಗಾರಿಕೆ. ಆದ್ದರಿಂದ ಸರ್ಕಾರ ಲಾಸ್ ಮಾಡಿಕೊಂಡು 2 ಲಕ್ಷ 75 ಸಾವಿರ ರೂಪಾಯಿಗಳಿಗೆ ಕೊಡುತ್ತಿದ್ದೇವೆ. ಅವರಿಗೆ ಆರೂವರೆ ಕೋಟಿ ಲಾಸ್ ಆದರೆ, ಸರ್ಕಾರಕ್ಕೆ ನಷ್ಟವಾಗುತ್ತದೆ, ಫಾರೆಸ್ಟ್ ಇಲಾಖೆಗೆ ನಷ್ಟವಾರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ಕೈಗಾರಿಕೆಯನ್ನು ಯಾವ ಪ್ರಕಾರ ಪುನರ್ ವಸತಿ ಮಾಡುವುದಕ್ಕೆ ಸಾಧ್ಯ ಎಂದು ನೋಡಿ ಪುನರ್ ವಸತಿಗೆ ಪ್ರಯತ್ನ ಮಾಡುತ್ತೇವೆ. ಮತ್ತೆ ಖಾಸಗೀಕರಣ ಮಾಡತಕ್ಕ ವಿಚಾರ ಸರ್ಕಾರದ ಗಮನದಲ್ಲಿ ಇಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ : ನಮ್ಮ ಕರ್ನಾಟಕ ರಾಜ್ಯದಲ್ಲಿ ಇದು ಹೆಮ್ಮೆಯ ಕೈಗಾರಿಕೆ. ಅದು ಲಾಭದಾಯಕವಾಗಿ ನಡೆಯಬೇಕಾದರೆ, ಅಲ್ಲಿಗೆ ಬೇಕಾದಂಥ,

ದಕ್ಷತೆಯಿಂದ ನೋಡಿಕೊಳ್ಳುವಂಥ ಅಧಿಕಾರಿಗಳೇ ಮುಖ್ಯ ಕಾರಣ. ಅಕ್ಕುಮಲೇಟೆಡ್ ಲಾಸ್ ಆಗಿದೆ. ಅದರ ಮೇಲೆ ಬರ್ಡನ್ ಸಾಕಷ್ಟು ಇದೆ. ಇಂಟರೆಸ್ಟ್ ಕೊಡುವುದರಲ್ಲಿಯೂ ಕೈಗಾರಿಕೆ ನಷ್ಟ ತೋರಿಸುತ್ತಿದೆ.

ಇವತ್ತು ಅಲ್ಲಿಗೆ ಒಳ್ಳೆಯ ಅಧ್ಯಕ್ಷರನ್ನು ನೇಮಕ ಮಾಡಿರುವುದರಿಂದ, ಅದು ಉತ್ತಮವಾದ ಕೈಗಾರಿಕೆಯಾಗಿ ಉಳಿಯುವುದಕ್ಕೆ ಅವಕಾಶ ಮಾಡಿದ್ದೀರಿ. ಇದನ್ನು ನಾನು ಸ್ವಾಗತಿಸುತ್ತೇನೆ. ಮುಂದೆಯೂ ಹೆಚ್ಚಿನ ಸಹಾಯ ಮಾಡಿ, ಇದು ಕರ್ನಾಟಕದ ಹೆಮ್ಮೆಯ ಕೈಗಾರಿಕೆಯಾಗಿ ಉಳಿಯುವುದಕ್ಕೆ ಪ್ರಯತ್ನ ಮಾಡಿ. ಬೇಕಾದಷ್ಟು ಮಲ್ಟಿ ನ್ಯಾಷನಲ್ ಕಂಪನಿಗಳು ಬಂದು ಸ್ಪರ್ಧಯಲ್ಲಿದ್ದರೂ ಸಹಿತ, ಒಳ್ಳೆಯ ದೃಷ್ಟಿಯಿಂದ ಆಡಳಿತ ಮಾಡುವ, ದಕ್ಷ ಅಧಿಕಾರಿಗಳು ಅಲ್ಲಿ ಬಂದರೆ, ಉತ್ತಮವಾದ ಕೈಗಾರಿಕೆಯಾಗುತ್ತದೆ ಎನ್ನವುದರಲ್ಲಿ ಯಾವುದೇ ಪ್ರಶ್ನೆ ಇಲ್ಲ. ಈ ದಿಸೆಯಲ್ಲಿ ಸ್ಪರ್ಧಾತ್ಮಕವಾಗಿ, ಕೆಲಸ ಮಾಡುವಂಥ, ದಕ್ಷ ಅಧಿಕಾರಿಯನ್ನು ನೇಮಿಸಿ. ಸರ್ಕಾರ ಈ ಕೈಗಾರಿಕೆಯನ್ನು ಉಳಿಸಿಕೊಳ್ಳಬೇಕೆಂದು, ತಮ್ಮ ಮೂಲಕ ಮಾನ್ಯ ಕೈಗಾರಿಕಾ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನೂ ಯಾವುದಾದರೂ ಸಲಹೆ ಇದ್ದರೆ ಕೊಡಬೇಕು. ಅದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇನೆ.

ನಿಯಮ 351ರ ಅಡಿಯಲ್ಲಿ ಬರತಕ್ಕ ವಿಷಯಗಳು

ಅರಕಲಗೂಡು ತಾಲ್ಲೂಕಿನ, ಕೋಣನೂರು - ಕಟ್ಟೆಪುರ ಮಧ್ಯದಲ್ಲಿ ಕಾವೇರಿ ನದಿಗೆ ತೂಗು ಸೇತುವೆ ನಿರ್ಮಾಣ

ಶ್ರೀ ಎನ್.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ಅರಕಲಗೂಡು ತಾಲ್ಲೂಕಿನ, ಹೊಣಸೂರು - ಕಟ್ಟೇಪುರ ಮಧ್ಯದಲ್ಲಿ ಕಾವೇರಿ ನದಿಗೆ ತೂಗು ಸೇತುವೆ ನಿರ್ಮಿಸಲು ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ದೊರಕಿ, ಟೆಂಡರ್ ಸಹ ಆಗಿ, ಅಧಿಕಾರಿಗಳ ಅನವಶ್ಯಕ ಅಡಚಣೆಗಳಿಂದಾಗಿ ಕೆಲಸದ ಪ್ರಗತಿ ಕುಂಠಿತವಾಗಿರುವುದರಿಂದ, ಸಾರ್ವಜನಿಕ ಸೌಲಭ್ಯದಿಂದ ವಂಚಿತರಾಗಿ ತೊಂದರೆಗೆ ಒಳಗಾಗುತ್ತಿರುವ ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತಾಗಿ ತೂಗು ಸೇತುವೆ ನಿರ್ಮಿಸಲು ಒತ್ತಾಯಪೂರ್ವಕವಾಗಿ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಸದರಿ ತೂಗು ಸೇತುವೆಯು ಪಾದಚಾರಿಗಳ ಸೇತುವೆಯಾಗಿದ್ದು, ಫೆಬ್ರವರಿ 1993 ರಲ್ಲಿ ರೂ.9.98 ಲಕ್ಷಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಸನದಲ್ಲಿ ಇವರಿಂದ ಆಡಳಿತ ಅನುಮೋದನೆಯಾಗಿದ್ದು ಕಾರ್ಯಪಾಲಕ ಇಂಜಿನಿಯರ್ ಜಿಲ್ಲಾ ಪರಷತ್ ಇಂಜಿನಿಯರಿಂಗ್ ವಿಭಾಗ ಹಾಸನ ಇವರು ಏಪ್ರೀಲ್ 1993ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. 1994-95 ರೂ. 1.50 ಲಕ್ಷಗಳ ಅನುದಾನವನ್ನು ಜಿಲ್ಲಾ ಪರಿಷತ್ ಆಯವ್ಯಯ ಪಟ್ಟಿಯಲ್ಲಿ ಹೊಂದಿರುತ್ತದೆ. ಈ ಸೇತುವೆಯು 170 ಮೀ. ಉದ್ದ ಹಾಗೂ1.2 ಮಿ. ಅಗಲವಿರುತ್ತದೆ.

ಸದರಿ ಸಿವಿಲ್ ಕಾಮಗಾರಿಗಳಿಗೆ ಜೂನ್ 93 ರಲ್ಲಿ ಟೆಂಡರ್ ಕರೆಯಲಾಗಿದ್ದು ಅಕ್ಟೋಬರ್ 1993 ರಲ್ಲಿ ಶ್ರೀ ಸೈಯದ್ ಅಲಿ ಅವರ ಕನಿಷ್ಟ ಗುತ್ತಿಗೆಯಾದ 9.5 ಶೇಕಡಾ ಹೆಚ್ಚುವರಿಯ ಟೆಂಡರನ್ನು ಸ್ವೀಕಾರ ಮಾಡಲಾಗಿದೆ. ಕರಾರಿನಂತೆ ಸಿವಿಲ್ ಕಾಮಗಾರಿಯನ್ನು ಜನವರಿ 1994ರಲ್ಲಿ ಪೂರೈಸಬೇಕಾಗಿತ್ತು.